144ನೇ ಅಧಿವೇಶನ
ನಿ-72
ಕ್ರ- 89 ಕಂಪ್ಯೂಟರ್



<u>ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ಇವರು ಮಂಡಿಸಿರುವ ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಹೇಳಿಕೆ:</u>

ವಿಷಯ:- ಕರ್ನಾಟಕ ಪ್ರೀ-ಯೂನಿವರ್ಸಿಟಿ ಎಜುಕೇಶನ್-2006 ರೂಲ್-14 ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಕಾಸಕು/2016-2017 ದಿನಾಂಕ:20-02-2017ರ ಅಡಿಯಲ್ಲಿ ಉಪನ್ಯಾಸಕರ ಕಾರ್ಯಭಾರ ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ತೆರವಾಗಿರುವ ಹುದ್ದೆಗಳನ್ನು ತುಂಬಿಕೊಳ್ಳುವ ಆಗಿರುವ ತೊಂದರೆಗಳ ಕುರಿತು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದೆ.

<u>ಉತ್ತರ</u>

ಪದವಿ ಪೂರ್ವ ಶಿಕ್ಷಣ ಇಲಾಖೆಯು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಕಾರ್ಯಭಾರದ ಕುರಿತು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಕಾಸಕು/2016-17 ದಿನಾಂಕ:20-02-2017ರಲ್ಲಿ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೊಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) 2006ರ ನಿಯಮ 14 ರಂತೆ ಉಪನ್ಯಾಸಕರುಗಳಿಗೆ 16/20 ಅವಧಿಗಳ ಕಾರ್ಯಭಾರವನ್ನು ಸರಿದೂಗಿಸುವಂತೆ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸೂಚಿಸಲಾಗಿತ್ತು.

ಪದವಿ ಪೂರ್ವ ಶಿಕ್ಷಣ(ಶೈಕ್ಷಣಿಕ, ನೊಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) 2006ರ ನಿಯಮ 15, 16 ಮತ್ತು 17ರನ್ವಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಸದರಿ ನಿಯಮಗಳನ್ನು ಸರ್ಕಾರದಿಂದ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತದೆ.

ಅದರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 107 ಟಿಪಿಯು 2017 ದಿನಾಂಕ:27-09-2018ರಲ್ಲಿ ಮೇಲಿನ ನಿಯಮಗಳ ನಿಯಮ 14ಕ್ಕೆ ತಿದ್ದುಪಡಿ ತಂದು ಖಾಸಗಿ ಪದವಿ ಪೂರ್ವ ಕಾಲೇಜುಗಳ ವಿಜ್ಞಾನ ವಿಷಯಗಳಿಗೆ ವಾರದಲ್ಲಿ ತಲಾ 24 ಗಂಟೆಗಳು ಹಾಗೂ ಕಲಾ, ವಾಣಿಜ್ಯ ಮತ್ತು ಭಾಷಾ ವಿಷಯಗಳಿಗೆ ವಾರದಲ್ಲಿ ತಲಾ 20 ಗಂಟೆಗಳ ಕಾರ್ಯಭಾರವನ್ನು ನಿಗಧಿಪಡಿಸಲಾಗಿರುತ್ತದೆ.

ಮುಂದುವರೆದು, ಸಾಕಷ್ಟು ಕಾರ್ಯಭಾರ ಇರುವ ಹುದ್ದೆಗಳನ್ನು ಮಾತ್ರ ವೇತನಾನುದಾನಕ್ಕೆ ಒಳಪಡಿಸುವುದು. ಒಂದು ವೇಳೆ ಕಾರ್ಯಭಾರ ಇಲ್ಲದೇ ಇರುವ ಪಕ್ಷದಲ್ಲಿ ಸಮೀಪದ ಇನ್ನೊಂದು ಅನುದಾನಿತ ಪದವಿ ಪೂರ್ವ ಕಾಲೇಜಿಗೆ ಹೊಂದಾಣಿಕೆ ಮಾಡಿ ಅನುಮೋದನೆ ನೀಡಲಾಗುವುದು. ಆದರೆ, ಹೊಂದಾಣಿಕೆ ಮಾಡಿರುವ ಕಾಲೇಜಿನಲ್ಲಿ ಇರುವ ಹುದ್ದೆಯನ್ನು ಖಾಯಂ ಆಗಿ ಹಿಂಪಡೆಯಲಾಗುವುದು. ಇದಕ್ಕೆ ಸಂಬಂಧಪಟ್ಟ ಆಡಳಿತ ಮಂಡಳಿಯ ಅನುಮತಿ ಪಡೆಯಬೇಕಾಗುತ್ತದೆ.

ಸದರಿ ಅಧಿಸೂಚನೆನ್ವಯ ನಿಗಧಿತ ಕಾರ್ಯಭಾರ ಹೊಂದಿರುವ ದಿನಾಂಕ:31-12-2015ರೊಳಗೆ ಖಾಲಿಯಾಗಿರುವ ಅನುದಾನಿತ ಉಪನ್ಯಾಸಕರ ಹುದ್ದೆಗಳನ್ನು ನಿಯಮಾನುಸಾರ ತುಂಬಿಕೊಳ್ಳಲು ಆಡಳಿತ ಮಂಡಳಿಗಳಿಗೆ ಅನುಮತಿ ನೀಡಲಾಗುತ್ತಿದೆ.

ನಿಗಧಿತ ಕಾರ್ಯಭಾರ ಹೊಂದಿಲ್ಲದ/ಕೊರತೆ ಇರುವ ಅನುದಾನಿತ ಉಪನ್ಯಾಸಕರ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಹಾಗೆ ಮಾಡಿದಲ್ಲಿ ಸರ್ಕಾರದ ಹಣದ ಪೂರ್ಣ ಉಪಯೋಗ ಸಾಧ್ಯವಾಗುವುದಿಲ್ಲ. ಪೂರ್ಣ ಕಾರ್ಯಭಾರ ಒದಗಿಸಿಕೊಂಡಿರುವ ಬಗ್ಗೆ ಆಡಳಿತ ಮಂಡಳಿಗಳು ಪ್ರಸ್ತಾವನೆ ಸಲ್ಲಿಸಿದಲ್ಲಿ ಹುದ್ದೆಗಳನ್ನು ತುಂಬಿಕೊಳ್ಳಲು ನಿಯಮಾನುಸಾರ ಪರಿಶೀಲಿಸಿ ಅನುಮತಿ ನೀಡಲಾಗುತ್ತದೆ.

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಸಂಖ್ಯೆ:ಇಪಿ 139 ಡಿಜಿಡಬ್ಲ್ಯೂ 2021
ದಿನಾಂಕ: 17-09-2021